ಟಾರ್ಗೆಟೆಡ್ ಥೆರಪಿ ಮಾಡುವುದರಿಂದ ಯಾವುದೇ ರೀತಿಯ ಸಮಸ್ಯೆ ಆಗುವುದಿಲ್ಲ. ಕೇವಲ ಕ್ಯಾನ್ಸರ್‌ಕಾರಕ ಗಡ್ಡೆಗಳನ್ನು ಮಾತ್ರ ಗುಣಪಡಿಸಲಾಗುವುದು. ಹೀಗಾಗಿ ಕೀಮೊಥೆರಪಿ ಅವಶ್ಯಕತೆ ಇರುವುದಿಲ್ಲ.

**-ಡಾ. ಮಂಗೇಶ್**

ಕ್ಯಾನ್ಸರ್ ತಜ್ಞರು, ಫೋರ್ಟಿಸ್ ಆಸ್ಪತ್ರೆ, ಬೆಂಗಳೂರು





ಇದು ಯಾತನಾಮಯೂ ಆಗಿತ್ತು. ಆದರೆ ಈ ಪರ್ಸನಲೈಸ್ಡ್ ಟಾರ್ಗೆಟೆಡ್ ಥೆರಪಿಯಲ್ಲಿ ರೋಗಿಗೆ ಕ್ಯಾನ್ಸರ್ ಯಾವ ಹಂತದಲ್ಲಿ ಹಾಗೂ ಇದಕ್ಕೆ ಯಾವ ಚಿಕಿತ್ಸೆ ಅಗತ್ಯವಿದೆ ಎಂದು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ. ಜೊತೆಗೆ, ರೋಗಿಯ ವಯಸ್ಸನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಅಲ್ಲದೆ, ರೋಗಿಯು ಬಿಪಿ, ಮಧುಮೇಹ, ಹೃದಯ ಸಮಸ್ಯೆ ಸೇರಿದಂತೆ ಇತರೆ ಕೊಮಾರ್ಬಿಡಿಟಿ ಸಮಸ್ಯೆಯಿಂದ ಬಳಲುತ್ತಿರುವರೇ ಎಂಬುದನ್ನು ಗಮನಿಸಲಾಗುವುದು. ಈ ರೀತಿಯ ವೈಯಕ್ತಿಕ ವಿವರ ಪಡೆದ ಬಳಿಕ ನೀಡುವ ಥೆರಪಿಯೇ ಪರ್ಸನಲೈಸ್ಡ್ ಥೆರಪಿ. ಇದು ಅತ್ಯಂತ ಸುಲಭ ಹಾಗೂ ಮಹಿಳೆಯರು ಯಾವುದೇ ಭಯವಿಲ್ಲದೇ ಮಾಡಿಸಿಕೊಳ್ಳಬಹುದಾದ ಚಿಕಿತ್ಸೆ.

‘ಒಮ್ಮೆ ರೋಗಿಯ ವಿವರ ಪಡೆದ ಬಳಿಕ ಸ್ತನಕ್ಯಾನ್ಸರ್‌ಗೆ ಯಾವ ಚಿಕಿತ್ಸೆ ಸೂಕ್ತ ಎಂದು ಮೆಡಿಕಲ್ ಆಂಕಾಲಜಿಸ್ಟ್ ನಿರ್ಧರಿಸುತ್ತಾರೆ. ಕೆಲವರಿಗೆ ಕ್ಯಾನ್ಸರ್ ಕಣಗಳು ಇಡೀ ಸ್ತನವನ್ನೇ ಆವರಿಸಿರುವುದರಿಂದ ಸಂಪೂರ್ಣ ಸ್ತನವನ್ನೇ ತೆಗೆಯದೆ ಬೇರೆ ದಾರಿಯೇ ಇರುವುದಿಲ್ಲ. ಆದರೆ ಈ ಚಿಕಿತ್ಸೆ ಎಲ್ಲಾ ವಯಸ್ಸಿನವರಿಗೂ ಸೂಕ್ತವೆನಿಸುವುದಿಲ್ಲ. ಏಕೆಂದರೆ, ಸಣ್ಣ ವಯಸ್ಸಿನವರಿಗೆ ಸಂಪೂರ್ಣ ಸ್ತನ ತೆಗೆಯುವುದರಿಂದ ಅವರು ಮಾನಸಿಕವಾಗಿ ಕುಗ್ಗಬಹುದು. ಹೀಗಾಗಿ ರೋಗಿಯ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಂಡು ಚಿಕಿತ್ಸಾ ವಿಧಾನವನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಟಾರ್ಗೆಟೆಡ್ ಥೆರಪಿ ಮಾಡುವುದರಿಂದ ಯಾವುದೇ ರೀತಿಯ ಸಮಸ್ಯೆ ಆಗುವುದಿಲ್ಲ. ಕೇವಲ ಕ್ಯಾನ್ಸರ್‌ಕಾರಕ ಗಡ್ಡೆಗಳನ್ನು ಮಾತ್ರ ಗುಣಪಡಿಸಲಾಗುವುದು. ಹೀಗಾಗಿ ಕೀಮೊಥೆರಪಿ ಅವಶ್ಯಕತೆ ಇರುವುದಿಲ್ಲ’ ಎಂದು ಹೇಳುತ್ತಾರೆ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ತಜ್ಞರಾಗಿರುವ ಡಾ. ಮಂಗೇಶ್ ಕಾಮತ್.

## ವಯಸ್ಸಾದವರಿಗೆ...

‘ವಯಸ್ಸಾದ ಕೆಲ ಮಹಿಳೆಯರಿಗೆ ಸ್ತನ ಕ್ಯಾನ್ಸರ್ ಬಂದಿದ್ದರೂ ಕೀಮೊಥೆರಪಿ ನೀಡುವುದು ಅಸಾಧ್ಯ. ಇಂಥ ಮಹಿಳೆಯರಿಗೆ ಹಾರ್ಮೋನ್ ಮಾತ್ರೆಗಳನ್ನು ನೀಡಲಾಗುವುದು. ರೇಡಿಯೇಷನ್ ಕೂಡ ನೀಡಲಾಗುವುದಿಲ್ಲ. ಸ್ತನ ಕ್ಯಾನ್ಸರ್ ಉಲ್ಬಣವಾಗಿದ್ದರೂ ಕೀಮೊಥೆರಪಿ ಇಲ್ಲದೆ ಗುಣಪಡಿಸಲಾಗುವುದು’ ಎನ್ನುತ್ತಾರೆ ಡಾ. ಮಂಗೇಶ್.

‘ಇಷ್ಟೇ ಅಲ್ಲದೆ ಟ್ರಿಪ್ಪಲ್ ನೆಗೆಟಿವ್ ಬ್ರೆಸ್ಟ್ ಕ್ಯಾನ್ಸರ್ ಇರುವವರಿಗೂ ಇಮ್ಯುನೊ ಥೆರಪಿ ಹಾಗೂ ಇತರೆ ಥೆರಪಿ ಮೂಲಕವೇ ಗುಣಪಡಿಸಲಾಗುವುದು. ಹೀಗೆ ಪರ್ಸನಲೈಸ್ಡ್ ಥೆರಪಿ ನೀಡುವ ಮೂಲಕ ಕೀಮೊಥೆರಪಿ, ರೇಡಿಯೇಷನ್ ಥೆರಪಿ ಇಲ್ಲದೆಯೂ ಕ್ಯಾನ್ಸರ್‌ನಿಂದ ಮುಕ್ತರಾಗಬಹುದು’ ಎನ್ನುವುದು ಈ ವೈದ್ಯರ ಅಭಿಮತ.

ಈ ಪರ್ಸನಲೈಸ್ಡ್ ಥೆರಪಿ ಕಳೆದ ಐದಾರು ವರ್ಷಗಳಿಂದ ಪ್ರಚಲಿತದಲ್ಲಿದ್ದರೂ ಪ್ರಚಾರ ಸಿಗದೆ ಅನೇಕ ಮಹಿಳೆಯರು ಈ ಸುಲಭ ಚಿಕಿತ್ಸೆಯಿಂದ ವಂಚಿತರಾಗಿದ್ದರು. ಆದರೆ ಈಗ ಮಹಿಳೆಯರು ಈ ರೀತಿಯ ಥೆರಪಿಗೆ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಕಡಿಮೆ ದರದಲ್ಲಿಯೂ ಸ್ತನಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲಾಗುತ್ತಿದೆ’ ಎನ್ನುತ್ತಾರೆ ಡಾ. ಮಂಗೇಶ್.

## ಸ್ತನ ಕ್ಯಾನ್ಸರ್ ಲಕ್ಷಣಗಳು

ಸ್ತನದ ಗಾತ್ರ, ಬಣ್ಣ, ಸ್ವರೂಪದಲ್ಲಿ ಬದಲಾವಣೆ, ಮೊಲೆತೊಟ್ಟು ಒಳಮುಖವಾಗಿ ಮಡಚಿಕೊಂಡು ಅದರಿಂದ ರಕ್ತ ಅಥವಾ ಕೀವು ಸ್ರವಿಸಬಹುದು. ಆದ್ದರಿಂದ ಮಹಿಳೆಯರು ತಮ್ಮ ಸ್ತನದಲ್ಲಿ ಆಗುತ್ತಿರುವ ಎಲ್ಲ ಬದಲಾವಣೆಗಳನ್ನು ಗಮನಿಸುತ್ತಿದ್ದು ತೊಂದರೆ ಇದ್ದರೆ ಸಂಕೋಚ ಪಡದೇ ತಜ್ಞವೈದ್ಯರಿಂದ ತಪಾಸಣೆ, ಮ್ಯಾಮೋಗ್ರಫಿ, ಎಂಆರ್‌ಐ, ಅಲ್ಟ್ರಾಸೌಂಡ್ ಮುಂತಾದ ಪರೀಕ್ಷೆಗಳನ್ನೂ ಮಾಡಿಸಿಕೊಳ್ಳಬೇಕು.

## ಪರೀಕ್ಷೆ, ಚಿಕಿತ್ಸೆಗಳೇನು?

ಸ್ತನ ಕ್ಯಾನ್ಸರ್‌ಗೆ ಮೊದಲ ಚಿಕಿತ್ಸೆ ಎಂದರೆ ‘ಸೆಲ್ಫ್ ಬ್ರೆಸ್ಟ್ ಎಕ್ಸಾಮಿನೇಷನ್’ (ಸ್ತನವನ್ನು ಮುಟ್ಟಿ ಗಂಟುಗಳಿವೆಯೇ, ವ್ಯತ್ಯಾಸಗಳಿವೆಯೇ ಎಂಬುದನ್ನು ಪತ್ತೆ ಹಚ್ಚುವುದು) ಮುಟ್ಟು ಆದ ಮೇಲೆ ನಾಲ್ಕು ದಿನದ ಬಳಿಕ ಈ ಟೆಸ್ಟ್ ಮಾಡಿಕೊಳ್ಳಬೇಕು. ಅಲ್ಟ್ರಾ ಸೌಂಡ್, ಮ್ಯಾಮೊಗ್ರಾಮ್, ಎಕ್ಸರೇ ಮಾಡಿಸಬೇಕು. ಆರಂಭಿಕ ಹಂತದಲ್ಲಿ ಸೆಂಟಿನಲ್ ನೋಡ್ ಬಯಾಪ್ಸಿ ಮಾಡಿಸಬೇಕು, ಕೀಮೊಥೆರಪಿ, ರೇಡಿಯೊಥೆರಪಿ, ಹಾರ್ಮೋನ್ ಥೆರಪಿ ಹಾಗೂ ಟಾರ್ಗೆಟ್ ಥೆರಪಿಯಂತಹ ಚಿಕಿತ್ಸೆಗೆ ಒಳಪಡಿಸಬಹುದು.

## ಕಾರಣಗಳೇನು?

ಮಹಿಳೆಯರಲ್ಲಿ ಕಂಡುಬರುವ ಕ್ಯಾನ್ಸರ್‌ಗಳಲ್ಲಿ ಸ್ತನ ಕ್ಯಾನ್ಸರ್ ಪ್ರಮುಖವಾದದ್ದು. ಒಂದು ಅಧ್ಯಯನದ ಪ್ರಕಾರ ಭಾರತದಲ್ಲಿ ಶೇ. 28ರಷ್ಟು ಮಹಿಳೆಯರು ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಇದಕ್ಕೆ ಪ್ರಮುಖ ಕಾರಣವೆಂದರೆ ಜೀವನಶೈಲಿ ಬದಲಾವಣೆ, ಜೊತೆಗೆ ವಂಶವಾಹಿ ಸಮಸ್ಯೆಯೂ ಕಾರಣ ಎನ್ನುತ್ತದೆ ವೈದ್ಯಲೋಕ.

ಸಾಮಾನ್ಯವಾಗಿ ಸ್ತನ ಕ್ಯಾನ್ಸರ್ ಬರಲು ವಯಸ್ಸಿನ ನಿರ್ಬಂಧವೂ ಇಲ್ಲ. ಯಾವ ವಯಸ್ಸಿನಲ್ಲಾದರೂ ಸ್ತನ ಕ್ಯಾನ್ಸರ್ ಬರಬಹುದು. ಹಾಗೇ ಹದಿಹರೆಯದ ಹುಡುಗಿಯರಿಂದ ಮೆನೊಪಾಸ್ ಆದ ಮಹಿಳೆಯರಲ್ಲೂ ಸ್ತನ ಕ್ಯಾನ್ಸರ್ ಕಂಡುಬರಬಹುದು.

ಅತಿತೂಕ, ಮದ್ಯಸೇವನೆ, ಹಾರ್ಮೋನ್‌ಗಳ ಏರುಪೇರು, ಗರ್ಭನಿರೋಧಕ ಮಾತ್ರೆಗಳ ಅತಿ ಬಳಕೆ, ವಿಕಿರಣಕ್ಕೆ ಮೈಒಡ್ಡುವುದು, ಬೇರೆ ಕಾಯಿಲೆಗಳಿಗೆ ಅತಿಯಾದ ಆ್ಯಂಟಿಬಯೊಟಿಕ್ ಸೇವನೆ, ಮಾನಸಿಕ ಒತ್ತಡ... ಮುಂತಾದವು ಕೂಡ ಸ್ತನ ಕ್ಯಾನ್ಸರ್‌ಗೆ ಕಾರಣಗಳಾಗಬಹುದು. ಹೆಚ್ಚು ಜನರ ಜೊತೆ ಲೈಂಗಿಕ ಸಂಪರ್ಕ, ಮಗುವಿಗೆ ಎದೆಹಾಲುಣಿಸದೇ ಇರುವ ಮಹಿಳೆಯರಲ್ಲಿಯೂ ಸ್ತನ ಕ್ಯಾನ್ಸರ್ ಕಂಡುಬರಬಹುದು.